# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/Special Summer Camp/143/2025-26/021 ದಿನಾಂಕ:01.04.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ

ಮಾನ್ಯರೆ,

**ವಿಷಯ: ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಯೋಗ, ಪ್ರಕೃತಿ ಚಿಕಿತ್ಸೆ, ಪೌಷ್ಠಿಕ ಆಹಾರ ಮಾಹಿತಿ ಶಿಬಿರಕ್ಕೆ ಹಿರಿಯ ಸ್ಕೌಟ್ಸ್-ಗೈಡ್ಸ್ & ರೋವರ್ಸ್-ರೇಂಜರ್ಸ್‌ಗಳನ್ನು ನಿಯೋಜಿಸುವ ಬಗ್ಗೆ**

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಮತ್ತು ದಕ್ಷಿಣ ಕನ್ನಡ & ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಸಂಸ್ಥೆ ಇವರ ಸಹಯೋಗದೊಂದಿಗೆ ಹಿರಿಯ ಸ್ಕೌಟ್ಸ್-ಗೈಡ್ಸ್ & ರೋವರ್ಸ್-ರೇಂಜರ್ಸ್‌ಗಳನ್ನು ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಯೋಗ, ಪ್ರಕೃತಿ ಚಿಕಿತ್ಸೆ, ಪೌಷ್ಠಿಕ ಆಹಾರ ಮಾಹಿತಿ ಶಿಬಿರವನ್ನು **ದಿನಾಂಕ: 04.05.2026 ರಿಂದ 08.05.2026ರ ವರೆಗೆ** ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ, ಉಜಿರೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| | |
|---|---|
| ಶಿಬಿರ | ಹಿರಿಯ ಸ್ಕೌಟ್ಸ್-ಗೈಡ್ಸ್ & ರೋವರ್ಸ್-ರೇಂಜರ್ಸ್‌ಗಳನ್ನು ವಿಶೇಷ ಬೇಸಿಗೆ ಶಿಬಿರದ ಅಡಿಯಲ್ಲಿ ರಾಜ್ಯ ಮಟ್ಟದ ಯೋಗ, ಪ್ರಕೃತಿ ಚಿಕಿತ್ಸೆ, ಪೌಷ್ಠಿಕ ಆಹಾರ ಮಾಹಿತಿ ಶಿಬಿರ |
| ದಿನಾಂಕ | ದಿನಾಂಕ: 04.05.2026 ರಿಂದ 08.05.2026ರ ವರೆಗೆ |
| ವರದಿ ಮಾಡುವ ಸ್ಥಳ | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ, ಉಜಿರೆ, ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ |
| ಹಾಜರಾಗುವ ವೇಳೆ ಮತ್ತು ದಿನಾಂಕ | ದಿನಾಂಕ: 04.05.2026 ರಂದು ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು. (ಶಿಬಿರಕ್ಕೆ ತಡವಾಗಿ ಬರುವಂತಿಲ್ಲ.) |
| ಬಿಡುಗಡೆ ಮಾಡುವ ದಿನಾಂಕ | ದಿನಾಂಕ 08.05.2026 ಮಧ್ಯಾಹ್ನ ಊಟದ ನಂತರ ಬಿಡುಗಡೆ |
| ನೊಂದಣಿ & ಶಿಬಿರ ಶುಲ್ಕ | ತಲಾ ರೂ.500/- |
| ಆನ್‌ಲೈನ್ ನೊಂದಾವಣಿ | ಭಾಗವಹಿಸುವ ಹಿರಿಯ ಸ್ಕೌಟ್ಸ್-ಗೈಡ್ಸ್ ರೋವರ್ಸ್-ರೇಂಜರ್ಸ್‌ಗಳು ಈ ಲಿಂಕ್ https://zfrmz.in/TF98PNDp0qCoJL73l6kT ನೊಂದಾವಣಿ ಮಾಡಿಕೊಳ್ಳುವುದು. |
| ತರಬೇಕಾದ ಸಾಮಾಗ್ರಿಗಳು | ಶಿಬಿರಕ್ಕೆ ಅವಶ್ಯಕವಿರುವ ಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ, ಬದಲಿ ಉಡುಪು, ತಟ್ಟೆ, ಲೋಟೆ, ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣಿಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿ ಉಡುಪು, ದೈಹಿಕ ವೈದ್ಯಕೀಯ ಪ್ರಮಾಣ ಪತ್ರ |
| ಪ್ರತಿ ಜಿಲ್ಲೆಗೆ ನಿಗಧಿಪಡಿಸಿರುವ ಕೋಟಾ | ಪ್ರತಿ ಜಿಲ್ಲೆಯಿಂದ ತೃತೀಯ ಸೋಪಾನ/ನಿಪುಣ್ ಹೊಂದಿರುವ ಗರಿಷ್ಠ 5 ರೋವರ್ಸ್/ರೇಂಜರ್ಸ್/ಹಿರಿಯ ಸ್ಕೌಟ್-ಗೈಡ್‌ಗಳನ್ನು/ದಳನಾಯಕರು ಸಹ ನಿಯೋಜಿಸುವುದು. |

| | |
|---|---|
| ಪ್ರಯಾಣ ವೆಚ್ಚ | ಆಯಾಯ ಶಾಲಾ/ಕಾಲೇಜಿನ ಸ್ಕೌಟ್–ಗೈಡ್/ರೋವರ್–ರೇಂಜರ್ ನಿಧಿಯಿಂದ ಭರಿಸುವುದು |
| ಊಟ ಮತ್ತು ವಸತಿ ವ್ಯವಸ್ಥೆ | ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯವರು ವ್ಯವಸ್ಥೆ ಮಾಡಿರುತ್ತಾರೆ |
| ಸಂಪರ್ಕಿಸಬೇಕಾದ ಸಂಖ್ಯೆ | ಶ್ರೀ. ಭರತ್‌ರಾಜ್ ಕೆ, ಎಎಸ್‌ಒಸಿ, ದಕ್ಷಿಣ ಕನ್ನಡ – 8073895340<br>ಶ್ರೀ ಎಂ. ಪ್ರಭಾಕರ್ ಭಟ್, ಎಸ್.ಒ.ಸಿ – 9448914540<br>ಶ್ರೀಮತಿ ಮಂಜುಳ. ಸಿ, ಎಸ್.ಒ.ಸಿ – 9482433516 |

ಭಾಗವಹಿಸುವ ರೋವರ್ಸ್–ರೋವರ್ಸ್/ಸ್ಕೌಟ್ಸ್–ಗೈಡ್ಸ್‌ಗಳ ಶಿಬಿರ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು ಆಯಾಯ ಕಾಲೇಜಿನ ರೋವರ್ಸ್–ರೇಂಜರ್ಸ್/ಶಾಲಾ ಸ್ಕೌಟ್–ಗೈಡ್ ನಿಧಿಯಿಂದ ಭರಿಸುವುದು. ಆಸಕ್ತ ರೋವರ್ಸ್–ರೇಂಜರ್ಸ್/ಹಿರಿಯ ಸ್ಕೌಟ್ಸ್–ಗೈಡ್ಸ್‌ಗಳನ್ನು ಆಯ್ಕೆ ಮಾಡಿ, ಮೇಲ್ಕಂಡ ಶಿಬಿರಕ್ಕೆ ನಿಯೋಜಿಸಲು ಕೋರಲಾಗಿದೆ. ಭಾಗವಹಿಸುವ ರೋವರ್ಸ್–ರೇಂಜರ್ಸ್‌ಗಳ ವಿವರಗಳನ್ನು ದಿನಾಂಕ: 01.05.2026ರ ಒಳಗಾಗಿ ರಾಜ್ಯ ಸಂಸ್ಥೆಗೆ ತಪ್ಪದೇ ಕಳುಹಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪ ಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿ ಮಾಹಿತಿಗಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದಕ್ಷಿಣ ಕನ್ನಡ ಜಿಲ್ಲೆ
2. ಎ.ಎಸ್.ಒ.ಸಿ/ಡಿಒ/ಡಿಒಸಿ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳು, ಭಾ.ಸ್ಕೌ&ಗೈ, ಇವರುಗಳ ಸೂಕ್ತ ಕ್ರಮಕ್ಕಾಗಿ